೧೦) ರಾಜ್ಯದಲ್ಲಿ ಗ್ರಾಮಾಧಿಕಾರಿಗಳು, ತೋಟ್ಟಿ, ತಾಳವಾರರುಗಳಿಗೆ ಗೌರವ ಧನವನ್ನು ಕೊಡುವಲ್ಲಿ ಆದಾಯ ಮಿತಿ ಹಾಕಿರುವುದನ್ನು ತೆಗೆದುಹಾಕುವ ಬಗ್ಗೆ.

ಶ್ರೀ ಬಿ. ಗಂಗಣ್ಣ (ಕಳ್ಳಂಬೆಳ್ಳ).—ಮಾನ್ಯ ಅಧ್ಯಕ್ಷರೇ, ಗ್ರಾಮಾಧಿಕಾರಿಗಳ ಸೇವೆಯನ್ನು ಆದರಲ್ಲೂ ಪಟೇಲರುಗಳ ಮತ್ತು ತೋಟಿ, ತಳವಾರರುಗಳ ಸೇವೆಯನ್ನು ತೋಟಿ ತಳವಾರರುಗಳಿಗೂ, ಮಾಹೆಯಾನ ಗೌರವಧನವನ್ನು ಕೊಡಲೊಪ್ಪಿ ಮಂಜೂರ್ಮಾಡಿರುವುದು ಸರಿಯಷ್ಟೆ. ಇದೇ ರೀತಿ ಶ್ಯಾನಭೋಗರುಗಳಿಗೂ ಇದಕ್ಕೂ ಹಿಂದೆ, ಗೌರವಧನ ನೀಡಲು ಮಂಜೂರಾತಿ ನೀಡಲಾಗಿರುತ್ತದೆ. ಶ್ಯಾನುಭೋಗರಿಗೂ ಪಟೇಲರುಗಳಿಗೂ ಗೌರವಧನ ನೀಡಿಕೆಯಲ್ಲಿ ಸರ್ಕಾರ ತೋರಿಸಿರುವ ಔಚಿತ್ಯ ಸರಿಯಿಲ್ಲ. ಗೌರವಧನಕ್ಕೆ ಪಾತ್ರವಾಗಿರುವ ರಾಜಕಾರಣಿಗಳಿಗೂ, ಶ್ಯಾನುಭೋಗರುಗಳಿಗೂ ಆದಾಯದ ಮಿತಿಯನ್ನು ಗೊತ್ತುಪಡಿಸಿರುವುದಿಲ್ಲ, ಆದರೆ ಪಟೇಲರು, ತೋಟಿ ತಳವಾರರುಗಳಿಗೆ ಮಾತ್ರ ೪,೮೦೦ ರೂಪಾಯಿಗಳಿಗಿಂತಲೂ ಹೆಚ್ಚು ಆದಾಯ ಪಡೆಯುವ ಪಟೇಲರು, ತೋಟಿ ತಳವಾರರುಗಳ ಗೌರವಧನ ಪಡೆಯಲು ಅರ್ಹರಲ್ಲ ಎಂಬ ಆದೇಶವು ನ್ಯಾಯಸಮ್ಮತವಾದುದಾಗಿರುವುದಿಲ್ಲ. ಈ ತಾರತಮ್ಯವನ್ನು ಮಾಡದೇ ಪಟೇಲರುಗಳಿಗೂ ಮಂತ್ತು ತೋಟಿ ತಳವಾರರುಗಳಿಗೂ, ಎಲ್ಲಾ ವರ್ಗಗಳವರಂತೆ ಗೌರವ ಧನವನ್ನು ಪಡೆಯಲು ಇರುವ ಆದಾಯದ ಮಿತಿಯನ್ನು ತೆಗೆದುಹಾಕಿ ವಿನಾಯಿತಿ ನೀಡಿ ಗೌರವ ಧನವನ್ನು ಕೊಡಲು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಪಟೇಲರುಗಳು, ತೋಟಿ ತಳವಾರರು ಮತ್ತು ಗ್ರಾಮ ನೌಕರರಾಗಿ ಸೇವೆ ಸಲ್ಲಿಸುತ್ತಿದ್ದವರನ್ನು ಅವರ ಅವಧಿ ಮತ್ತು ವಿವರಗಳನ್ನು ಬರಾಬರ್ಡ್ ಪುಸ್ತಕದಲ್ಲಿ ದಾಖಲೆ ಮಾಡಿಕೊಂಡಿಲ್ಲದ ಅನೇಕ ಪ್ರಕರಣಗಳಿವೆ. ಇಂತಹ ಸಂದರ್ಭದಲ್ಲಿ ಅವರವರಿಗೆ ಸಂಬಂಧಿಸಿದ ವಂಶವೃಕ್ಷದ ಆಧಾರದ ಮೇಲೆ ಮಂತ್ತು ಸ್ಥಳೀಯ ಮಹಜರ್ ಮೇಲೆ ಪಟೇಲರುಗಳಿಗೆ ಗೌರವಧನ ಮಂಜೂರ್ಮಾಡಿಕೊಡಬೇಕೆಂದು ಮತ್ತು ಪಟೇಲರುಗಳು ಹತ್ತು ವರ್ಷಕ್ಕೂ ಮೇಲ್ಪಟ್ಟು ಬದಲಿ ಸೇವೆ ಸಲ್ಲಿಸಿರುವ, ಬದಲಿ ಪಟೇಲರುಗಳಿಗೂ ನಿವೃತ್ತಿ ವೇತನದ ಲಾಭ ದೊರೆಯುವಂತೆ ಆಗಬೇಕು ಎಂದು ಸರ್ಕಾರವನ್ನು ಒತ್ತಾಯಿಸುತ್ತಾ, ಮೇಲ್ಕಂಡವುಗಳನ್ನು, ಮಂಜೂರಾತಿ ಮಾಡಿ ತಕ್ಷಣ ದಿಂದಲೇ ಜಾರಿ ಕೊಡಬೇಕೆಂದು ಸರ್ಕಾರವನ್ನು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಹಾಗೂ ನೀರಾವರಿ ಸಚಿವರು).—ಮಾನ್ಯ ಅಧ್ಯಕ್ಷರೇ, ಪಟೇಲರ ವಿಚಾರದಲ್ಲಿ ಮೊದಲು ಗೌರವಧನ ಕೊಡುತ್ತಾ ಇರಲಿಲ್ಲ. ಈಗ ಒಂದು ನೂರು ರೂಪಾಯಿಗಳ ಗೌರವಧನ ಕೊಡುತ್ತಿದ್ದೇವೆ. ಜೊತೆಗೆ ಇವರಿಗೆ ಆದಾಯದ ಮಿತಿಯನ್ನು ಹಾಕಿದ್ದೇವೆ. ಇದನ್ನು ಸಡಿಲಗೊಳಿಸುವ ಬಗ್ಗೆ ಮನವಿಗಳು ಬಂದಿವೆ. ಇದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ, ಆದಷ್ಟು ಬೇಗ ಸೂಕ್ತ ನಿರ್ಣಯ ತೆಗೆದುಕೊಳ್ಳುತ್ತದೆ.

೧೧ ರಾಜ್ಯದಲ್ಲಿರುವ ದಾದಿಯಂದಿರನ್ನು ಮತ್ತು ದಾದಿಯರ ಪರಿವೀಕ್ಷಕರ ಸೇವೆಯನ್ನು ಡೈರೆಕ್ಟರೇಟ್ ಆಫ್ ನರ್ಸಿಂಗ್ ಇವರ ಕಕ್ಷೆಯಲ್ಲಿ ಬರುವಂತೆ ಮಾಡುವುದು.

SRI R. VENKATARAMAIAH.—With reference to Government Order No. HFW 186 MSN 84 Bangalore dated 25-2-1987, Government has accorded separate 'Directorate of Nursing' with the approval of Planning Department Note No. 87 dated 12-1-1987 and F. D. Note No. 178 Expenditure 3-87 dated 2-2-1987 and various posts are created in the established 'Directorate of Nursing' as per G. O. No. HFW 186 MSN 84 dated 27-5-1987.

There is a urgent public demand and there is public necessity absolutely to control the entire Nursing Personnel in the State which

includes Nurses, Midwives. Health Visitors, Student Nurses, Teachers in Nursing Schools, Nursing College, Nursing Council and Public Nursing Personnel and also number of Nursing Superintendents Grade I and II etc, nearly 25,000 Nursing Personnel in the State under Directorate of Nursing.

There are Senior Personnel in Nursing services in our State who are also fit to hold higher posts in the created vacant posts in the Directorate whereas there is inordinate delay to start functioning of the Directorate.

Therefore, I call upon Minister for Health for immediate reply.

ಶ್ರೀ ಬಿ. ರಾಚಯ್ಯ (ಆರೋಗ್ಯ ಸಚಿವರು) —ಮಾನ್ಯ ಅಧ್ಯಕ್ಷರೇ, ಆರೋಗ್ಯ ಮಂತ್ರಿ ಕಾಟೀಂಬ ಕಲ್ಯಾಣ ಇಲಾಖೆಯಲ್ಲಿ ಭೋದಕ ಹಾಗೂ ಶುಶ್ರೂಷಾ ವರ್ಗದ ವಿಭಾಗಕ್ಕೆ ಸೇರಿದಂತೆ ಈ ಕೆಳಕಂಡ ಹುದ್ದೆಗಳು ಮಂಜೂರು ಆಗಿರುತ್ತವೆ.

೧	ಪ್ರಾಂಶುಪಾಲರು (ಶುಶ್ರೂಷಕ ಕಾಲೇಜ್)	...	೧
೨	ಪ್ರಾಂಶುಪಾಲರು (ಶುಶ್ರೂಷ ಶಾಲೆಗಳು)	...	೮
೩	ಹಿರಿಯ ಶುಶ್ರೂಷಾ ಚಿಕಿತ್ಸಾ ಶಿಕ್ಷಕರು	...	೧
೪	ಶುಶ್ರೂಷಾ ಅಧೀಕ್ಷಕರು ದರ್ಜೆ–೧	...	೩೯
೫	ಶುಶ್ರೂಷಾ ಅಧೀಕ್ಷಕರು ದರ್ಜೆ–೨	...	೨೪೫
೬	ಉಪನ್ಯಾಸಕರು	...	೫
೭	ನರ್ಸಿಂಗ್ ಟ್ಯೂಟರ್ಸ್	...	೯೫
೮	ಸ್ಟಾಫ್ ನರ್ಸ್	...	೩೦೭೪

ಜನಾರೋಗ್ಯ ವಿಭಾಗಕ್ಕೆ ಸೇರಿದಂತೆ ಈ ಕೆಳಕಂಡಂತೆ ಹುದ್ದೆಗಳು ಮಂಜೂರು ಆಗಿರುತ್ತವೆ.

೧	ಆರೋಗ್ಯ ಸಹಾಯಕರು (ಪುರುಷ)	...	೧೧೩೧
೨	ಆರೋಗ್ಯ ಸಹಾಯಕರು (ಮಹಿಳೆ)	...	೧೨೧೫
೩	ಆರೋಗ್ಯ ಕಾರ್ಯಕರ್ತರು (ಪುರುಷ)	...	೫೨೧೭
೪	ಆರೋಗ್ಯ ಕಾರ್ಯಕರ್ತರು (ಮಹಿಳೆ)	...	೬೭೮೦

ಮೇಲ್ಕಂಡ ಹುದ್ದೆಗಳನ್ನು ಗವನಮೆಂಟಲ್ಲಿಟ್ಟುಕೊಂಡು, ಅದಕ್ಕೆ ಪ್ರತ್ಯೇಕ ನಿರ್ದೇಶನಾಲಯದ ಆವಶ್ಯಕತೆಯನ್ನು ಆರಿತು ದಿನಾಂಕ ೨೫–೨–೧೯೮೭ ರಂದು ಹೊರಡಿಸಿದ ಸರ್ಕಾರಿ ಆದೇಶದ ಸಂಖ್ಯೆ ಹೆಚ್.ಎಫ್.ಡಬ್ಲ್ಯೂ ೧೮೬ ಎಂಎಸ್.ಎನ್ ೮೪ ಅದರಲ್ಲಿ ಶುಶ್ರೂಷಕ ನಿರ್ದೇಶನಾಲಯವನ್ನು ಸೃಷ್ಟಿಸಲಾಗಿದೆ. ನಂತರ ದಿನಾಂಕ ೨೯–೫–೧೯೮೭ ರಂದು ಹೊರಡಿಸಿದ ಸರ್ಕಾರದ ಆದೇಶದ ಸಂಖ್ಯೆ. ಹೆಚ್.ಎಫ್.ಡಬ್ಲ್ಯೂ. ೧೮೬ ಎಂ.ಎಸ್.ಎನ್. ೮೪ ಅದರಲ್ಲಿ ಈ ಕೆಳಕಂಡ ಹುದ್ದೆಗಳನ್ನು ಶುಶ್ರೂಷಕ ನಿರ್ದೇಶನಾಲಯಕ್ಕೆ ಮಂಜೂರು ಮಾಡಲಾಗಿದೆ.

೧	ನಿರ್ದೇಶಕರು,	...	೧
೨	ಸಹಾಯಕ, ನಿರ್ದೇಶಕರು	...	೧
೩	ಉಪ ನಿರ್ದೇಶಕರು (ಶುಶ್ರೂಷಾ ಶಿಕ್ಷಣ ಮತ್ತು ತರಬೇತಿ)	...	೧
೪	ಉಪ ನಿರ್ದೇಶಕರು (ಶುಶ್ರೂಷಾ ಸೇವೆಗಳು ಮತ್ತು ವೈದ್ಯಕೀಯ ಶಿಕ್ಷಣ)	...	೧
೫	ಉಪ ನಿರ್ದೇಶಕರು (ಶುಶ್ರೂಷಾ ಸೇವೆಗಳು, ಜನಾರೋಗ್ಯ)	...	೧
೬	ಆಡಳಿತಾಧಿಕಾರಿ	...	೧
೭	ಅಧೀಕ್ಷಕರು	...	೧

೮	ಮೊದಲನೇ ದರ್ಜೆ ಸಹಾಯಕರು	...	೧
೯	ಶೀಘ್ರಲಿಪಿಗಾರರು	...	೨
೧೦	ಎರಡನೇ ದರ್ಜೆ ಸಹಾಯಕರು	...	೩
೧೧	ಗುಮಾಸ್ತ ಮಂತ್ತು ಬೆರಳಚ್ಚುಗಾರರು	...	೩
೧೨	ಚಾಲಕರು	...	೨
೧೩	ಗ್ರೂಪ್ ಡಿ ಸಿಬ್ಬಂದಿ ವರ್ಗ	...	೮

ಮೇಲ್ಕಂಡ ಹುದ್ದೆಗಳನ್ನು ತುಂಬಲು ನೇಮಕಾತಿ ನಿಯಮಗಳನ್ನು ರೂಪಿಸಿಲ್ಲ. ಅವುಗಳನ್ನು ರೂಪಿಸಲು ದಿನಾಂಕ ೨೯–೧೦–೮೮ ರಂದು ಹೊರಡಿಸಿದ ಸರ್ಕಾರಿ ಆದೇಶದ ಸಂಖ್ಯೆ. ಹೆಚ್‌ಎಫ್‌ಡಬ್ಲ್ಯೂ ೧೬೬ ಎಂಎಸ್‌ಎನ್ ೮೭ ಆದರಲ್ಲಿ ಈ ಕೆಳಕಂಡ ಸಮಿತಿಯನ್ನು ರಚಿಸಲಾಗಿದೆ.

೧	ಕಾರ್ಯದರ್ಶಿ, ಆರೋಗ್ಯ ಮತ್ತು ಕು. ಕಲ್ಯಾಣ ಇಲಾಖೆ.	...	ಅಧ್ಯಕ್ಷರ
೨	ಅಪರ. ಉಪಕಾರ್ಯದರ್ಶಿ, ಆರೋಗ್ಯ ಮಂತ್ತು ಕು. ಕ. ಇಲಾಖೆ	...	ಸದಸ್ಯ ಕಾರ್ಯದರ್ಶಿ
೩	ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು.	...	ಸದಸ್ಯರು
೪	ನಿರ್ದೇಶಕರು, ವೈದ್ಯಕೀಯ ಶಿಕ್ಷಣ.	...	ಸದಸ್ಯರು
೫	ನಿರ್ದೇಶಕರು, ಭಾರತೀಯ ವೈದ್ಯಪದ್ಧತಿ ಮಂತ್ತು ಹೋಮಿಯೋಪತಿ.	...	ಸದಸ್ಯರು
೬	ಅಪರ ನಿರ್ದೇಶಕರು (ಕು.ಕ ಮತ್ತು ತಾ.ಮಂ.ಅ)	...	ಸದಸ್ಯರು
೭	ಶ್ರೀಮತಿ ಆರ್. ಕೆ. ಸುದ್, ಶುಶ್ರೂಷಾ ಸಲಹೆಗಾರರು, ಆರೋಗ್ಯ ಸೇವೆಗಳ ನಿರ್ದೇಶನಾಲಯ, ನವದೆಹಲಿ.	...	ಸದಸ್ಯರು
೮	ಹಿರಿಯ ಸಹಾಯಕ ನಿರ್ದೇಶಕರು (ನರ್ಸಿಂಗ್) ಆರೋಗ್ಯ ಮತ್ತು ಕು. ಕಲ್ಯಾಣ ಸೇವೆಗಳ ನಿರ್ದೇಶನಾಲಯ	...	ಸದಸ್ಯರು
೯	ಸಹಾಯಕ ಡ್ರಾಪ್ಟ್ಸ್‌ಮನ್ ಮತ್ತು ಪದನಿಮಿತ್ತ ಉಪಕಾರ್ಯದರ್ಶಿ, ಕಾನೂನು ಇಲಾಖೆ.	...	ಸದಸ್ಯರು
೧೦	ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮ)	...	ಸದಸ್ಯರು
೧೧	ಅಧೀನ ಕಾರ್ಯದರ್ಶಿ–೨, ಆರ್ಥಿಕ ಇಲಾಖೆ.	...	ಸದಸ್ಯರು

ಮೇಲೆ ಸೂಚಿಸಿರುವಂತೆ ನೇಮಕಾತಿ ನಿಯಮಗಳನ್ನು ರಚಿಸಲು ಸಭೆಯನ್ನು ಕರೆಯಬೇಕಾಗಿತ್ತು. ಸಭೆಯನ್ನು ಕರೆಯಲು ಅನೇಕ ಸಲ ಪ್ರಯತ್ನಪಟ್ಟು, ದಿನಾಂಕ ೧೧–೫–೮೮ ರಂದು ಸಭೆಯನ್ನು ಕರೆಯಲಾಯಿತು. ಆದರೆ ಶುಶ್ರೂಷಾ ಸಲಹೆಗಾರರು, ಆರೋಗ್ಯ ಸೇವೆಗಳ ನಿರ್ದೇಶನಾಲಯ, ನವದೆಹಲಿ ಅವರು ಸಭೆಯನ್ನು ಮುಂದೂಡಬೇಕೆಂದು ಕೋರಿದ್ದರಿಂದ, ಸಭೆಯನ್ನು ನಡೆಸಲಾಗಲಿಲ್ಲ. ಆದರೂ ಆದಷ್ಟು ಬೇಗನೆ ಮತ್ತೊಂದು ದಿನವನ್ನು ನಿಗದಿಪಡಿಸಿ ಸಭೆಯನ್ನು ಕರೆದು ನೇಮಕಾತಿ ನಿಯಮಗಳನ್ನು ರೂಪಿಸಲಾಗುವುದು. ನಂತರ ಹೊಸದಾಗಿ ಸೃಷ್ಟಿಸಿರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.